
■ ಹನಿ

## ಶೂಮಿಯ ಬದುಕು

ಬದುಕು ಬಹಳಷ್ಟು ಸಲ ಅನೂಹ್ಯವೇ. ಇಲ್ಲವಾದಲ್ಲಿ ಜೀವನದ ಈ ಮಧ್ಯವಯಸ್ಸಿನಲ್ಲಿ ಮೈಕೆಲ್ ಶುಮಾಕರ್ (45) ಹೀಗೆ ಮೈಮೇಲೆ ಪ್ರಜ್ಞೆಯೇ ಇಲ್ಲದೆ ಆಸ್ಪತ್ರೆಯ ಐಸಿಯುನಲ್ಲಿ ವೆಂಟಿಲೇಟರ್ ಆಧರಿಸಿಕೊಂಡು ಮಲಗಬೇಕಾಗುತ್ತದೆಂದು ಯಾರು ತಾನೇ ಅಂದುಕೊಂಡಿದ್ದರು? ಆತನಿಗೆ ಬದುಕಿನಲ್ಲಿ ಎಲ್ಲವೂ ಸಿಕ್ಕಿತ್ತು. ಹಣ, ಕೀರ್ತಿ, ನೆಮ್ಮದಿ, ಆರೋಗ್ಯ ಎಲ್ಲವೂ ಕಾಲಬುಡದಲ್ಲಿ ಬಂದು ಬಿದ್ದಿದ್ದವು. ಆದರೀಗ ಫ್ರಾನ್ಸ್‌ನ ಗ್ರೆನೊಬಲ್ ಯೂನಿವರ್ಸಿಟಿ ಆಸ್ಪತ್ರೆಯ ಐಸಿಯು ನಲ್ಲಿ ಆತನ ಪತ್ನಿ ಕೊರಿನ್ನಾ ಪ್ರತಿದಿನವೂ 8 ಗಂಟೆಗಳ ಕಾಲ ಪತಿಯ ಹಾಸಿಗೆ ಬದಿಯಲ್ಲೇ ಕುಳಿತುಕೊಳ್ಳುತ್ತಾಳೆ. ಆಗಾಗ್ಗೆ ಪತಿಯ ಜತೆಗೆ ಮಾತನಾಡುತ್ತಾಳೆ. 14ರ ಹರೆಯದ ಮಗ ಮಿಕ್ ಮತ್ತು 16ರ ಮಗಳು ಜಿನಾ ಅವರದ್ದೂ ಅದೇ ಕಥೆ. ಆದರೆ ಶುಮಾಕರ್ ಮಿಸುಕಾಡುತ್ತಿಲ್ಲ. ಸದ್ಯಕ್ಕೆ ಆತ ಕೋಮಾದಲ್ಲಿರುವ ಮಾಂಸದ ಮುದ್ದೆ. 'ಹೀಗೆಯೇ ಎಷ್ಟು ದಿನ, ತಿಂಗಳು, ವರ್ಷ ಎಂದು ಹೇಳಲು ಬರುವುದಿಲ್ಲ' ಎನ್ನುತ್ತಾರೆ ವೈದ್ಯರು.




ಎಫ್-1 ಕಾರ್ ರೇಸ್‌ನಲ್ಲಿ ಏಳು ಸಲ ವಿಶ್ವ ಚಾಂಪಿಯನ್ ಆದ ಶುಮಾಕರ್, ಆಲ್ಪ್ ಪರ್ವತದಲ್ಲಿ ಮಗನ ಜತೆ ಐಸ್ ಸ್ಕೀಯಿಂಗ್ ಮಾಡುತ್ತಿದ್ದಾಗ ಜಾರಿ ಬಿದ್ದು ಮೆದುಳು ಸ್ರಾವ ಆದದ್ದು ಡಿ.29ರಂದು. ತಕ್ಷಣ ಹೆಲಿಕಾಪ್ಟರ್‌ನಲ್ಲಿ ಆಸ್ಪತ್ರೆಗೆ ಸಾಗಿಸಿ ಶಸ್ತ್ರಚಿಕಿತ್ಸೆ ಮಾಡಲಾಯಿತು. ಈ ನೂರು ದಿನಗಳಲ್ಲಿ ಒಮ್ಮೆ ಕಣ್ಣುಬಿಟ್ಟ ಎಂದದ್ದು ಬಿಟ್ಟರೆ, ವೈದ್ಯರು ಯಾವ ಒಳ್ಳೆಯ ಸುದ್ದಿಯನ್ನೂ ಕೊಡಲಾಗಿಲ್ಲ. ಲಕ್ಷಾಂತರ ಅಭಿಮಾನಿಗಳು ತಮ್ಮ ಪ್ರೀತಿಯ 'ಶೂಮಿ'ಗಾಗಿ ಪ್ರಾರ್ಥಿಸುತ್ತಲೇ ಇದ್ದಾರೆ.

'ಶೂಮಿಯ ಪತ್ನಿ ತಮ್ಮ ಸ್ವಿಝರ್ಲೆಂಡಿನ ಬಂಗಲೆಯಲ್ಲಿ ಪತಿಗಾಗಿಯೇ ಒಂದು ವಿಶೇಷ ಮೆಡಿಕಲ್ ಸೂಟ್ ತಯಾರಿಸಿದ್ದಾಳೆ. ಅದಕ್ಕೆ 10 ದಶಲಕ್ಷ ಪೌಂಡ್ ಖರ್ಚಾಗಿದೆ. ಇನ್ನು ಮುಂದೆ ಶುಮಾಕರ್ ಜೀವನಪರ್ಯಂತ ಅಲ್ಲಿಯೇ ಇರುತ್ತಾರೆ' ಎಂಬ ಸುದ್ದಿಯೊಂದು ಬಂತು. ಅದರ ಬೆನ್ನಲ್ಲೇ ಕೊರಿನ್ನಾ, 'ಅದೆಲ್ಲ ಸುಳ್ಳು. ಶೂಮಿ ಖಂಡಿತಾ ಗುಣವಾಗುತ್ತಾನೆ. ನಾವು ಆಸ್ಪತ್ರೆಯಲ್ಲೇ ಕಾಯುತ್ತೇವೆ' ಎಂದಳು. ಆಶಾವಾದ ಏನೇ ಇದ್ದರೂ, ಆಸ್ಪತ್ರೆಯಲ್ಲಿ ಇದ್ದು ಪ್ರಯೋಜನವಿಲ್ಲ ಎಂದು ವೈದ್ಯರು ಹೇಳಿಯಾಗಿದೆಯಂತೆ. ಶೀಘ್ರವೇ ಪುನರ್ವಸತಿ ಕೇಂದ್ರವೊಂದಕ್ಕೆ ಶೂಮಿಯನ್ನು ಶಿಫ್ಟ್ ಮಾಡಬಹುದು ಎನ್ನುವುದು ಬಲ್ಲವರ ಹೇಳಿಕೆ. ಒಂದೊಮ್ಮೆ ಕೋಮಾದಿಂದ ಎಚ್ಚರವಾದರೂ ಶೂಮಿ ಕೈಬೆರಳು ಆಡಿಸಲು, ಮಾತನಾಡಲು ವರ್ಷಗಟ್ಟಳೆ ಫಿಸಿಯೊ ಥೆರೆಪಿ ಮಾಡಬೇಕಾಗುತ್ತದೆ ಎನ್ನುತ್ತಾರೆ ತಜ್ಞರು. ಶರವೇಗದ ಸ್ಪರ್ಧೆಯಲ್ಲಿ ವಿಶ್ವ ಚಾಂಪಿಯನ್ ಆದ ಶೂಮಿಯದ್ದು ಈಗ ಜಡ ಬದುಕು!



## ಮೇಧಕ್ಕನ ಸ್ಪರ್ಧೆ

ಕಳೆದ 35 ವರ್ಷಗಳಿಂದಲೂ ಜನಪರ ಹೋರಾಟಕ್ಕಾಗಿ ಬೀದಿಯಲ್ಲೇ ಇರುವ 59ರ ಮೇಧಾ ಪಾಟ್ಕರ್, ಈಶಾನ್ಯ ಮುಂಬೈ ಕ್ಷೇತ್ರದಿಂದ ಪಾರ್ಲಿಮೆಂಟ್ ಚುನಾವಣೆಗೆ ನಿಂತಿದ್ದಾರೆ. ಪಾರ್ಲಿಮೆಂಟ್ ಸದಸ್ಯರು ಮಾಡಿದ ಅಧ್ವಾನಗಳನ್ನು ವಿರೋಧಿಸುವುದೇ ಕಾಯಕ ಎಂದುಕೊಂಡಿದ್ದ ಪಾಟ್ಕರ್, ಅದೇ ಪಾರ್ಲಿಮೆಂಟಿಗೆ ಪ್ರವೇಶಿಸಲು ಯತ್ನಿಸುತ್ತಿರುವುದು ನಮ್ಮ ಪ್ರಜಾಪ್ರಭುತ್ವದ ಜೀವಂತಿಕೆಯ ಲಕ್ಷಣ. ಆದರೆ ಸಮೀಕ್ಷೆಗಳನ್ನು ನಂಬುವುದೇ ಆದಲ್ಲಿ, ಮೇಧಾ ತಾಯಿ ಗೆಲ್ಲುವ ಯಾವ ಸೂಚನೆಗಳೂ ಕಾಣಿಸುತ್ತಿಲ್ಲ!

ಈಶಾನ್ಯ ಮುಂಬೈ ಲೋಕಸಭಾ ಕ್ಷೇತ್ರದಲ್ಲಿ ಮೇಧಕ್ಕ ಎದುರಿಸುತ್ತಿರುವುದು ಎನ್‌ಸಿಪಿ ಯ ಹಾಲಿ ಸಂಸದ ಸಂಜಯ್ ದಿನಾ ಪಾಟೀಲ್ ಮತ್ತು ಮಾಜಿ ಸಂಸದ ಬಿಜೆಪಿಯ ಕಿರಿಟ್ ಸೋಮಯ್ಯ ಅವರನ್ನು. 1967ರಿಂದಲೂ ಇದು ಕಾಂಗ್ರೆಸ್-ನಿಷ್ಠ ಕ್ಷೇತ್ರ. ಬಿಜೆಪಿಯೂ ಮೂರು ಸಲ ಗೆದ್ದಿದೆ. ಹಾಗೆಂದು ಯಾರೂ ಎರಡು ಚುನಾವಣೆಯಲ್ಲಿ ಸತತ ಗೆಲುವು ಸಾಧಿಸಿಲ್ಲ. (77ರಲ್ಲಿ ಮತ್ತು 80ರಲ್ಲಿ ಜನತಾಪಕ್ಷದಿಂದ ಗೆದ್ದ ಡಾ.ಸುಬ್ರಹ್ಮಣ್ಯನ್ ಸ್ವಾಮಿ ಮಾತ್ರ ಅಪವಾದ!) ಈ ಸಲ ಮೇಧಾ ಸ್ಪರ್ಧೆಯಿಂದ ಬಿಜೆಪಿಗೆ ಗೆಲುವು ಸುಲಭವಾಗಲಿದೆ ಎನ್ನುತ್ತದೆ ಸಮೀಕ್ಷೆ.

ಸೋಶಿಯಲ್ ವರ್ಕ್‌ನಲ್ಲಿ ಎಂ.ಎ ಮಾಡಿ, ಟಾಟಾ ಇನ್‌ಸ್ಟಿಟ್ಯೂಟ್‌ನಲ್ಲಿ ಪ್ರಾಧ್ಯಾಪಕರಾಗಿ ಪಾಠದ ಜತೆಗೆ ಪಿಎಚ್‌ಡಿ ಮಾಡುತ್ತಿದ್ದ ಮೇಧಾ, ಎರಡನ್ನೂ ಬಿಟ್ಟು ನೇರವಾಗಿ ಬುಡಕಟ್ಟು ಜನರ ಸೇವೆಗಿಳಿದರು. ಗುಜರಾತ್, ಮಧ್ಯಪ್ರದೇಶ ಮತ್ತು ಮಹಾರಾಷ್ಟ್ರಗಳಲ್ಲಿ ಬುಡಕಟ್ಟು ಜನರ ಜತೆಗೆ ಬೆರೆತರು. ಮುಂಬೈಯಲ್ಲಂತೂ ಕೊಳೆಗೇರಿ ವಾಸಿಗಳಿಗೆ ಅವರೇ ಅಮ್ಮ. ಹಾಗಾಗಿ ಪ್ರಚಾರದಲ್ಲಿ ಸ್ಲಂ ವಾಸಿಗಳದ್ದೇ ಮೇಲುಗೈ. ಜನಸೇವೆಗಾಗಿ ರೈಟ್ ಲೈವ್ಲಿಹುಡ್, ಗೋಲ್ಡ್‌ಮೆನ್ ಎನ್ವಿರಾನ್‌ಮೆಂಟ್, ಗ್ರೀನ್ ರಿಬ್ಬನ್, ಮಹಾತ್ಮಾ ಪುಲೆ, ದೀನನಾಥ ಮಂಗೇಶ್ಕರ್ ಮುಂತಾಗಿ ಸಾಲು ಸಾಲು ಪ್ರಶಸ್ತಿಗಳನ್ನು ಗೆದ್ದಿರುವ ಮೇಧಕ್ಕ, ಪಾರ್ಲಿಮೆಂಟ್ ಪ್ರವೇಶಿಸಿದರೆ ದೇಶಕ್ಕೆ ಒಳ್ಳೆಯದು. ಆದರೆ ಹಾಗೆಂದು ಆಮ್ ಆದ್ಮಿ ಪಕ್ಷಕ್ಕೆ ಮಾತ್ರ ಅನ್ನಿಸಿದೆ. ಮೇಧಾರಂತಹ ಹೋರಾಟಗಾರ್ತಿಯರು ಅವಿರೋಧ ಆಯ್ಕೆ ಆಗುವ ಕಾಲ ಬರಬಹುದೆ? ●

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65